# ಸತ್ಯವೇದ ಅಧ್ಯಾಯನ ಮಾಡುವುದು ಹೇಗೆ ?

# HOW TO STUDY THE BIBLE ?

ಸತ್ಯವೇದ ಎನ್ನುವುದು ಒಂದು ಅಮೂಲ್ಯವಾದ ಪುಸ್ತಕ, ಲೋಕದಲ್ಲಿ ಬೇರೆ ಬೇರೆ ರೀತಿಯ ಧರ್ಮಗಳಿವೆ,
ಉದಾ::- ಹಿಂದೂ, ಇಸ್ಲಾಂ, ಬುದ್ಧಿಸಂ, ಯೂದಾಯಿಸಂ ಇದೇ ರೀತಿ ಎಲ್ಲಾ ಧರ್ಮಗಳಿಗೆ ವೇದಗಳಿದೆ, ಬುದ್ಧಿಸಂಮರಿಗೆ ಅವರಿಗೆ ಸಂಬಂಧಪಟ್ಟಂತ ಪುಸ್ತಕಗಳಿವೆ, ಇಸ್ಲಾಮಿಯರುಗಳಿಗೆ ಅವರಿಗೆ ಸಂಬಂಧಪಟ್ಟ ಕುರಾನ್ ಎಂಬ ಪುಸ್ತಕವಿದೆ. ಹಾಗೆ ಅನೇಕ ಧರ್ಮಗಳಿಗೆ ಅನೇಕ ಪುಸ್ತಕಗಳಿದೆ ಅದಕ್ಕೆ ವೇದಗಳು ಅಂತಾ ಹೆಸರು. ಅದೇ ರೀತಿ ಕ್ರೈಸ್ತರಾಗಿರುವ ನಮಗೆ ದೇವರು ಕೊಟ್ಟಿರುವ ಒಂದು ವೇದ ಯಾವುದೆಂದರೆ ಸತ್ಯವೇದ.

> ಎಲ್ಲಾ ವೇದಗಳೇ! ಆದರೆ ಇರುವಂತಹ ವೇದಗಳಲ್ಲಿ ಇರು ಸತ್ಯವೇದ. ಅದೇ ರೀತಿ ಇದನ್ನು ಯಾಕೆ ಸತ್ಯವೇದ ಅಂತಾ ಹೇಳುತ್ತಾರೆ ಅಂದರೆ ಇದರಲ್ಲಿ ಬರೆದಿರುವಂತಹ ಒಂದೊಂದು ಮಾತು ಸತ್ಯವಾಗಿದೆ, ಈ ಸತ್ಯವೇದದಲ್ಲಿರುವಂಹ ವಾಕ್ಯಗಳು ಖಂಡಿತವಾಗಿಯೂ ನೆರವೇರುತ್ತದೆ, ಇದು ನೆರವೇರದೆ ಇರುವದಕ್ಕೆ ಸಾಧ್ಯವೇ ಇಲ್ಲ. ಅದೇ ರೀತಿಯಾಗಿ ಯೇಸು ಕ್ರಿಸ್ತನು ಸಹ ಏನು ಹೇಳುತ್ತಾರೆ ಅಂದರೆ "ಈ ಧರ್ಮಶಾಸ್ತ್ರದಲ್ಲಿರುವ ಒಂದು ಸೊನ್ನೆಯಾಗಲಿ ಗುಳಿಸಾಗಲಿ ಅಳಿದು ಹೋಗುವುದಕ್ಕೆ ಸಾಧ್ಯವಿಲ್ಲ" ಎಂದು ಹೇಳುತ್ತಾರೆ. ಇದೇ ರೀತಿ ಸಂಪೂರ್ಣವಾಗಿ ದೇವರ ಎಲ್ಲಾ ಮಾತುಗಳು ನೆರವೇರಲೇಬೇಕು.

> ಈ ಸತ್ಯವೇದ ನಮಗೆ ಹೇಗೆ ಬಂತು ?
ಕ್ರಿ.ಶ. 1,440 ರಲ್ಲಿ ಮೊದಲನೇಯ ಬಾರಿಗೆ Printing press ನ್ನು ಕಂಡು ಹಿಡಿದರು. Printing press ನ್ನು ಕಂಡು ಹಿಡಿದ ತಕ್ಷಣ ಮೊದಲು "1st Print " "ಮೊದಲು ಮುದ್ರಣ" ಮಾಡಿದ ವಾಕ್ಯ ಯಾವುದೆಂದರೆ "BIBLE" "ಸತ್ಯವೇದ".ಅದು ಮಾತ್ರವಲ್ಲದೆ ಮೊದಲು Publish ಮಾಡಿದ ಪುಸ್ತಕ ಸಹ "ಸತ್ಯವೇದ". ಇದುವರೆಗೆ ಲೋಕದಲ್ಲಿ ಅಧಿಕವಾಗಿ ಮುದ್ರಣ ಮಾಡಿರುವಂತಹ ಪುಸ್ತಕ ಸಹ "ಸತ್ಯವೇದ". ಇದುವರೆಗೆ ಅತ್ಯಧಿಕವಾಗಿ ಮಾರಾಟ ವಾಗಿರುವತಹ ಮತ್ತು ಮಾರಾಟ ವಾಗುತ್ತಿರುವಂತಹ ಪುಸ್ತಕ ಅದು "ಸತ್ಯವೇದ". ಅದೇ ರೀತಿ ಲೋಕದಲ್ಲಿ ಇರುವಂತಹ ಎಲ್ಲಾ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟ ಪುಸ್ತಕ "Translation Book " ಸಹ ನಮ್ಮ "ಸತ್ಯವೇದ".

> ಆದರೆ "ಸತ್ಯವೇದ"ದಲ್ಲಿ ಮಾಡಿರುವ ದಾಖಲೆಯನ್ನು ಬೇರೆ ಯಾವ ಧರ್ಮದ ಪುಸ್ತಕದಲ್ಲಿಯೂ ಮಾಡಲಿಲ್ಲ.

> ಶ್ರೇಷ್ಠವಾಗಿರುವಂತಹ ಪುಸ್ತಕ ಯಾವುದೆಂದರೆ ಅದು ನಾವು ಓದುವ ಸತ್ಯವೇದವೇ ಆಗಿದೆ.

> "ಸತ್ಯವೇದ"ದಲ್ಲಿ ಒಟ್ಟು 66 ಪುಸ್ತಕಗಳಿವೆ. ಈ ಪುಸ್ತಕವನ್ನು 2 ಭಾಗವಾಗಿ ವಿಂಗಡಿಸಲಾಗಿದೆ. ಮೊದಲನೆಯ ಭಾಗವನ್ನು "ಹಳೆಯ ಒಡಂಬಡಿಕೆ" ಎಂದು ಕರೆಯಲಾಗುತ್ತದೆ. ಇದು 39 ಪುಸ್ತಕಗಳನ್ನು ಒಳಗೊಂಡಿದೆ, ಮತ್ತು ಇದನ್ನು ಬರೆದಿರುವವರು ಸಾಮಾನ್ಯ ಮನುಷ್ಯನಲ್ಲ. ದೇವರು ಆಯ್ಕೆಮಾಡಿರುವಂತ ಪ್ರವಾದಿಗಳು ಆಗಿದ್ದಾರೆ. ಇದರ ಮೂಲ ಪತ್ರಿಕೆಯು ಇಬ್ರಿಯ ಭಾಷೆಯಲ್ಲಿದೆ. ಎರಡನೇಯ ಭಾಗವನ್ನು "ಹೊಸ ಒಡಂಬಡಿಕೆ" ಎಂದು ಕರೆಯಲಾಗುತ್ತದೆ. ಇದು 27 ಮುಸ್ತಕಗಳನ್ನು ಒಳಗೊಂಡಿದೆ, ಇದನ್ನು ಬರೆದವರು ದೇವರು ಆಯ್ಕೆಮಾಡಿದಂತಹ ಅಪೋಸ್ತಲರು, ಇದರ ಮೂಲ ಪತ್ರಿಕೆಯು ಗ್ರೀಕ್ ಭಾಷೆಯಲ್ಲಿದೆ.

> ಸತ್ಯವೇದಲ್ಲಿನ 66 ಪುಸ್ತಕಗಳಲ್ಲಿ ಕೆಲವೊಂದು ವಾಕ್ಯಗಳನ್ನು ಓದಿದರೆ ನಮಗೆ ಸರಿಯಾಗಿ ಅರ್ಥವಾಗುವುದಿಲ್ಲ.
ಉದಾ :- ಹಳೆಯ ಒಡಂಬಡಿಕೆಯಲ್ಲಿ ಬರುವ ಯಾಜಕಕಾಂಡ ಎಂಬ ಪುಸ್ತಕದಲ್ಲಿ ದೇವರು "ಹೋರಿಯನ್ನು ಯಜ್ಞವಾಗಿ ಅರ್ಪಿಸಬೇಕು, ರಕ್ತವನ್ನು ತೆಗೆದುಕೊಂಡು ಪರಿಶುದ್ಧ ನೀರಿನಲ್ಲಿ ಚಿಮುಕಿಸಬೇಕು, ದೂಪ ಹಾಕಬೇಕು" ಹೀಗೆ ಅನೇಕ ವಿಷಯಗಳು ಅನ್ಯ ಧರ್ಮದವರ ಕಲಾಚಾರದ ಪ್ರಕಾರ ಇದೆ ಅನ್ನಿಸುತ್ತದೆ. ದೇವರು ಇದನ್ನೆಲ್ಲಾ ಏಕೆ ಹೇಳಿದ್ದಾರೆ ಎಂದು ನಮಗೆ ಅರ್ಥವಾಗುವುದಿಲ್ಲ.

> ಇನ್ನೊಂದು ವಿಚಾರ ನೋಡಬೇಕಾದರೆ, ದೇವರು ಬರೆಯಿಸಿರುವ "ಸತ್ಯವೇದ"ದಲ್ಲಿರುವ ಒಂದು ಪುಸ್ತಕದಲ್ಲಿ "ದೇವರು" ಎಂಬ ವಾಕ್ಯವೇ ಇಲ್ಲ, ಅದು ಯಾವ ಪುಸ್ತಕವೆಂದರೆ ಹಳೆಯ ಒಡಂಬಡಿಕೆಯಲ್ಲಿ ಬರುವ "ಎಸ್ತರಳು". ಎಸ್ತರಳು ಎಂಬ ಪುಸ್ತಕ ಸತ್ಯವೇದದಲ್ಲಿ

ಇರುವಂತಹ 66 ಪುಸ್ತಕದಲ್ಲಿ ಒಂದು, ಆದರೂ ಸಹ ದೇವರು ಇದನ್ನು ಸತ್ಯವೇದ ಎಂದು ಹೆಸರಿಟ್ಟಿದ್ದಾರೆ. ಅಂದರೆ ಈ ಪುಸ್ತಕ್ಕೆ ಅರ್ಥ ಇದೆಯಾ ? ಖಂಡಿತವಾಗಿ ಇರುವುದರಿಂದ ಈ ಪುಸ್ತಕಕ್ಕೆ ಸತ್ಯವೇದ ಎಂದು ಹೆಸರಿಟ್ಟಿದ್ದಾರೆ. ಇದರ ಬಗ್ಗೆ ಮುಂದಿನ ಪಾಠದಲ್ಲಿ ತಿಳಿದುಕೊಳ್ಳೋಣ.

> ಹಾಗೇ ನೋಡುವುದಾದರೆ "ಸತ್ಯವೇದ" ಬಹಳ ಮುಖ್ಯವಾಗಿರುವಂತಹ ಪುಸ್ತಕ. ಹಿಂದಿ ನಾವು ನೋಡಿದವು ಸತ್ಯವೇದ ಅಧಿಕವಾಗಿ ಮಾರಾಟವಾಗಿರುವಂತ ಪುಸ್ತಕ, ಮಾತ್ರವಲ್ಲದೆ ಹೆಚ್ಚು ಹೆಚ್ಚಾಗಿ ಜನರಿಂದ ಓದುತ್ತಿರುವ ಪುಸ್ತಕ ಮತ್ತು ಜನರು ಸರಿಯಾಗಿ ಅರ್ಥಮಾಡಿಕೊಳ್ಳಲಾರದ "Missunderstanding" ಮಾಡಿಕೊಳ್ಳುವಂತಹ ಪುಸ್ತಕ. ಏಕೆಂದರೆ ಸತ್ಯವೇದ ಇರುವುದು ಒಂದೇ, ಆದರೂ ಪಂಗಡಗಳು "Denomination" ಅನೇಕವಾಗಿರುವುದೇ ಇದಕ್ಕೆ ಕಾರಣ.

> ಕ್ರೈಸ್ತ ಧರ್ಮದಲ್ಲಿ ಈಗ ಎಷ್ಟು ಪಂಗಡಗಳಿವೆ ? ಹಾಗೆ ನೋಡಿದರೆ 750 ಪಂಗಡಗಳಿವೆ. ಈ 750 ಪಂಗಡಗಳಲ್ಲಿ ಯಾವುದು ಸತ್ಯ. ಹಾಗಾದರೆ ನಾವು ಏನು ಮಾಡಬೇಕು ಸತ್ಯವೇದವನ್ನು ಓದಿ ತಿಳಿದುಕೊಳ್ಳಬೇಕು, ಇಲ್ಲದಿದ್ದರೆ ಸತ್ಯ ಯಾವುದು ಎಂಬುದನ್ನು ನಾವು ಖಂಡಿತವಾಗಿಯೂ ತಿಳಿದುಕೊಳ್ಳಲಾಗುವುದಿಲ್ಲ.

> ಏನು ಸತ್ಯ ? ಯಾವುದು ಸತ್ಯ ?
**ಎಫೇಸದವರಿಗೆ 4:4** – "ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು ಒಬ್ಬನೇ ಪವಿತ್ರಾತ್ಮವನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು, ನಿಮ್ಮೆಲ್ಲರಿಗೂ ಕರ್ತನೂ ಒಬ್ಬನೇ ಭರವಸವೂ ಒಂದೇ, ಸ್ನಾನದೀಕ್ಷೆ ಒಂದೇ, ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ".

> ಮೇಲಿನ ವಾಕ್ಯದಲ್ಲಿ ನಾವು ಓದಿದಾಗ ನಮ್ಮೆಲ್ಲರಿಗೂ ಇರುವದು ಒಂದೇ ನಂಬಿಕೆ ಹಾಗಾದರೆ ನಮ್ಮೆಲ್ಲರಿಗೂ ಒಂದೇ ನಂಬಿಕೆ ಇರಬೇಕಾದರೆ ಇಷ್ಟು ಪಂಗಡಗಳು ಆಗುವುದಕ್ಕೆ ಹೇಗೆ ಸಾಧ್ಯ. ನಮಗೆ ಇರುವುದು ಸತ್ಯವೇದ ಒಂದೇ ಹಾಗಿರುವಾಗ ನಮಗೆ ಒಂದೇ ವಿಶ್ವಾಸವಿರಬೇಕು. ಹಾಗಾದರೆ ಒಂದೇ ವಿಶ್ವಾಸವು ಹೇಗೆ ಬರುತ್ತದೆ ? ಸಭೆಯ ಮುಖ್ಯಸ್ಥರ ಮಾತನ್ನು ಕೇಳುವುದರಿಂದಲೋ ಅಥವಾ ಸತ್ಯವೇದವನ್ನು ಓದಿ ತಿಳಿಕುಕೊಳ್ಳುವುದರಿಂದಲೋ ? ಹೌದು ಸತ್ಯವೇದವನ್ನು ಓದಿ ತಿಳಿದುಕೊಳ್ಳುವುದರಿಂದಲೇ. ಅದಕ್ಕೆ ಯೇಸು ಕ್ರಿಸ್ತನು ಹೇಳಿರುವ ಮಾತೇನೆಂದರೆ ! "ಸತ್ಯವನ್ನು ನೀವು ಅರಿಯುವಿರಿ ಸತ್ಯವು ನಿಮ್ಮನ್ನು ಬಿಡುಗಡೆಮಾಡುವುದು" ಇದಕ್ಕೆ ಸತ್ಯವೇದ ಅಧ್ಯಾಯನ ಅತಿ ಮುಖ್ಯವಾದುದಾಗಿದೆ. ಆದರೆ ಅನೇಕರು ಹೇಳುವುದೇನೆಂದರೆ ಆಳವಾಗಿ ಸತ್ಯವೇದ ಅಧ್ಯಾಯನ ಮಾಡುವುದರಿಂದ ಅನೇಕ ಪ್ರಶ್ನೆಗಳು ಉಂಟಾಗುತ್ತವೆ ಅಧಿಕ ಪ್ರಶ್ನೆಗಳಿಗೆ ಉತ್ತರವನ್ನು ದೇವರ ಬಳಿ ಕೇಳಿದರೆ ದೇವರಿಗೆ ಇಷ್ಟವಾಗುವುದಿಲ್ಲ ಎಂದು ಜ್ಞಾನಿಯಾದ ಸಾಲೊಮೊನನು ಹೇಳಿದ್ದಾರೆ.
**ಪ್ರಸಂಗಿ 1:18** – "ಬಹು ಜ್ಞಾನವಿದ್ದಲ್ಲಿ ಬಹು ಸಂಕಟ ಹೆಚ್ಚು ತಿಳುವಳಿಕೆಯನ್ನು ಪಡೆದವನಿಗೆ ಹೆಚ್ಚು ವ್ಯಥೆ".

> ಹೀಗಿರುವಾಗ ಸತ್ಯವೇದವನ್ನು ನಮಗೆ ಕೊಟ್ಟಿರುವಾಗ ಇದರ ಬಗ್ಗೆ ಪ್ರಶ್ನೆ ಕೇಳುವುದರಲ್ಲಿ ತಪ್ಪೇ ಇಲ್ಲಾ., ಅದಕ್ಕೆ ನಮ್ಮ ಕರ್ತನಾದ ಯೇಸು ಕ್ರಿಸ್ತನು ಹೇಳಿರುವುದೇನೆಂದರೆ "ಕೇಳಿರಿ ಕೊಡಲಾಗುವುದು ಹುಡುಕಿರಿ ಸಿಗುವುದು ತಟ್ಟಿರಿ ನಿಮಗೆ ತೆರೆಯಲ್ಪಡುವುದು" ಹಾಗಾದರೆ ಏನನ್ನು ಕೇಳಬೇಕು, ಏನನ್ನು ಹುಡುಕಬೇಕು, ಏನನ್ನು ತಟ್ಟಬೇಕು,

ಉದಾ :– ದೇವರೆ ನೀವು ಹೇಳಿದ್ದೀರಿ ಹುಡುಕಿರಿ ಸಿಗುವುದೆಂದು ನಾನು ಹುಡುಕುತ್ತಲೇ ಇದ್ದೇನೆ ಒಳ್ಳೆ ಕೆಲಸ ಸಿಕ್ಕುತ್ತಲೇ ಇಲ್ಲವೆಂದು ಅಲ್ಲ, ಅಥವಾ ದೇವರೇ ನನ್ನ ಸಂಬಳ ಇನ್ನು ಬಾರದ ಕಾರಣ ನನ್ನಲ್ಲಿ ಹಣವಿಲ್ಲ. ಆದುದರಿಂದ ನನಗೆ ಹಣ ಕೊಡಿ ಅಂತ ಅಲ್ಲಾ.. ಇಂತಹವುಗಳನ್ನು ನಾವು ಕೇಳಬೇಕೋ? ಅಲ್ಲ ! ಹಾಗಾದರೆ ಯೇಸು ಕ್ರಿಸ್ತನು ಯಾವ ಅರ್ಥದಲ್ಲಿ ಹೇಳಿದ್ದಾರೆ ? ಅಂದರೆ, ನಿಮಗಿರುವ ಅನೇಕ ಪ್ರಶ್ನೆಗಳನ್ನು ಕೇಳಿರಿ, ನನ್ನ ಬಾಗಿಲನ್ನು ತಟ್ಟಿರಿ, ಕೇಳಿದರೆ ನಿಮಗಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರವನನ್ನು ಕೊಡುತ್ತೇನೆ ಎಂದು ಅರ್ಥವಲ್ಲವೇ.
**ಯೆಶಾಯ 1:18** –"ಬನ್ನಿರಿ ವಾದಿಸುವ ಎಂದು ಯೆಹೋವನು ಅನ್ನುತ್ತಾನೆ, ನಿಮ್ಮ ಪಾಪಗಳು ಕಡು ಕಂಪಾಗಿದ್ದರೂ ಹಿಮದ ಹಾಗೆ ಬಳುಪಾಗುವವು, ಕಿರುಮಂಜಿ ಬಣ್ಣವಾಗಿದ್ದರೂ ಹಿಮದಂತೆ ಬೆಳ್ಳಗಾಗುವುದು". ಇದರ ಅರ್ಥವೇನು ?
ಉದಾ :– ಸಿದ್ದರಾಮಯ್ಯ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾರೆ ಇವರು ನಮಗೆ, "ಬನ್ರಪ್ಪಾ ಮೈಸೂರನ್ನು ಉದ್ದಾರ ಮಾಡಬೇಕೆಂದಿದ್ದೀನಿ" ಬನ್ನಿ Discuss ಮಾಡೋಣ ಎಂದು ಕರೆಯುತ್ತಾರಾ? ಇಲ್ಲಾ ಏಕೆಂದರೆ ಅವರಿರುವ ಸ್ಥಾನಕ್ಕೂ ನಮ್ಮ ಸ್ಥಾನಕ್ಕೂ ಸರಿ ಬೀಳುವುದಿಲ್ಲ. ಹೀಗಿರುವಾಗ ಪರಲೋಕದಲ್ಲಿ ಎಲ್ಲವನ್ನೂ ಸೃಷ್ಠಿ ಮಾಡಿರುವ ದೇವರು ನಮ್ಮನ್ನು ಬನ್ನಿರಿ ವಾದ ಮಾಡೋಣ ಎಂದು ಕರೆಯುತ್ತಾರಾ ? ಇಲ್ಲಾ

ಅಂದರೆ ದೇವರು ಖಂಡಿತವಾಗಿಯೂ ಸತ್ಯವೇದವನ್ನು ಅಧ್ಯಾಯನ ಮಾಡಲು ಸಾಧ್ಯವೇ ಇಲ್ಲ. ಗ್ರಂಥದಲ್ಲಿ ಏನನ್ನು ಹೇಳಿದ್ದಾರೆ ? ಅಂದರೆ ದೇವರಿಗೆ ಎಲ್ಲದಕ್ಕಿಂತ ಏನು ಇಷ್ಟ ಅಂದರೆ ಆತನ ಸತ್ಯವೇದದಲ್ಲಿರುವ ಜ್ಞಾನವನ್ನು ತಿಳಿದುಕೊಳ್ಳುವುದೇ ದೇವರಿಗೆ ತುಂಬಾ ಇಷ್ಟ.

**ಹೋಶೆಯ 6:6** –"ನನಗೆ ಯಜ್ಞವು ಬೇಡ ಕರುಣೆಯೇ ಬೇಕು. ಹೋಮಗಳಿಗಿಂತ ದೇವಜ್ಞಾನವೇ ಇಷ್ಟ."

> ದೇವರು ಯಲ್ಲದಕ್ಕಿಂತ ಹೆಚ್ಚು ಇಷ್ಟ ಪಡೋದು ದೇವಜ್ಞಾನ, ಅಧಿಕವಾಗಿ ಸತ್ಯವೇದವನ್ನು ಮಕ್ಕಳು ಓದಿ ತಿಳಿದುಕೊಳ್ಳಲಿ, ಅದೇ ರೀತಿ ಲೋಕದಲ್ಲಿ ಎಷ್ಟೊಂದು ಜನರು ನಾಶವಾಗುತ್ತಾ ಇದ್ದಾರೆ ಏಕೆ ನ್ಾಶವಾಗುತ್ತಾ ಇದ್ದಾರೆ ಅಂದರೆ ದೇವರ ಜ್ಞಾನವೇ ಇಲ್ಲದೇ ನಾಶವಾಗುತ್ತಿದ್ದಾರೆ.

**ಹೋಶೆಯ 4:6** – "ನನ್ನ ಜನರು ಜ್ಞಾನ ಹೀನರಾಗಿ ಹಾಳಾಗಿದ್ದಾರೆ, ನೀವು ಜ್ಞಾನವನ್ನು ತಳ್ಳಿ ಬಿಟ್ಟದ್ದರಿಂದ ಇನ್ನೂ ನನಗೆ ಯಾಜಕ ಸೇವೆ ಮಾಡದಂತೆ ನಾನು ನಿಮ್ಮನ್ನು ತಳ್ಳಿ ಬಿಡುವೆನು, ನೀವು ನಿಮ್ಮ ದೇವರ ಧರ್ಮೋಪದೇಶವನ್ನು ಮರೆತ ಕಾರಣ ನಾನು ನಿಮ್ಮ ಸಂತತಿಯವರನ್ನು ಮರೆಯುವೆನು" ಎಂದಿದ್ದಾರೆ. ಹೀಗಿರುವುದರಿಂದ ಸತ್ಯವೇದವನ್ನು ತಿಳಿದುಕೊಳ್ಳುವುದು ತುಂಬಾ ಪ್ರಾಮುಖ್ಯವಾಗಿದೆ.

> ನಾವು ಯಾವ ಪಂಗಡಕ್ಕೆ ಸೇರಿದವರು ಅಂದರೆ ನಾವು ಯಾವ ಪಂಗಡದವರು ಅಲ್ಲ ಆದರೆ ಎಲ್ಲಾ ಪಂಗಡದವರನ್ನು ನಂಬುತ್ತೇನೆ. ಆದರೆ ನಂಬಬೇಕು ಅಂದರೆ ಅದಕ್ಕೆ ಇರುವುದು ಒಂದೇ ಮಾರ್ಗ ಅದೇನೆಂದರೆ ಅವರು ಹೇಳುವಂತಹ ಮಾತು ದೇವರು ಕೊಟ್ಟಿರುವ ಸತ್ಯವೇದದಲ್ಲಿ ಇರಬೇಕು. ನಮ್ಮ ಬಗ್ಗೆ ಏನಾದರೂ ಸತ್ಯವೇದದಲ್ಲಿ ಕೊಟ್ಟಿದ್ದಾರೆ ಎಂದು ಹೇಳಿದರೆ ನಮ್ಮಂತವರ ಬಗ್ಗೆಯೂ ಸಹ ಸತ್ಯವೇದದಲ್ಲಿ ಕೊಟ್ಟಿದ್ದಾರೆ.

**ಅಪೋಸ್ತಲರ ಕೃತ್ಯಗಳು 17:10,11** – "ಕೂಡಲೇ ಸಹೋದರರು ರಾತ್ರಿಯಲ್ಲಿ ಪೌಲ ಸೀಲರನ್ನು ಬೇರೋಯಕ್ಕೆ ಕಳುಹಿಸಿಬಿಟ್ಟರು. ಅವರು ಅಲ್ಲಿಗೆ ಸೇರಿ ಯೆಹೂದ್ಯರ ಸಭಾಮಂದಿರಕೊಳಕ್ಕೆ ಹೋದರು ಆ ಸಭೆಯವರು ಥೆಸಲೋನಿಕದವರಿಗಿಂತ ಸದ್ಗುಣವುಳ್ಳವರಾಗಿದ್ದು ದೇವರ ವಾಕ್ಯವನ್ನು ಶುದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಅಲ್ಲವೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋದಿಸುತ್ತಿದ್ದರು".

> ಅಪೋಸ್ತಲರುಗಳು ಹೇಳುತ್ತಿದ್ದ ದೇವರ ಮಾತುಗಳನ್ನು ಬೇರೋಯ ಪಟ್ಟಣದವರು ನಂಬದೆ ಅದನ್ನು ಧರ್ಮಶಾಸ್ತ್ರದಲ್ಲಿ ನೋಡಿ ಪರೀಕ್ಷಿಸಿ ತೆಗೆದುಕೊಳ್ಳುತ್ತಿದ್ದರು. ಆದರೆ ನಾವು ನಮ್ಮ ಬೋದಕರು ಹೇಳುವಂತ ಮಾತುಗಳು ಸತ್ಯವೇದದಲ್ಲಿ ಇದೆಯಾ ಎಂದು ಪರೀಕ್ಷಿಸುವುದಿಲ್ಲ ಏಕೆಂದರೆ ನಮ್ಮ ಬೋದಕರು ದೊಡ್ಡವರು ಎಂದು ಬಾವಿಸುತ್ತೇವೆ. ಮಾತ್ರವಲ್ಲದೆ ನಮ್ಮ ಬೋದಕರ ಮೇಲೆ ಅಷ್ಟೊಂದು ನಂಬಿಕೆ. ಅವರು ಏನೇ ಹೇಳಿದರು ಖಂಡಿತವಾಗಿ ನಂಬುತ್ತೇವೆ ಆದರೆ ಅವರು ಹೇಳುವಂತಹ ಮಾತು ಸತ್ಯವೇದದಲ್ಲಿ ಇದೆಯೋ, ಇಲ್ಲವೋ ಎಂದು ತಿಳುಕೊಳ್ಳುವುದಿಲ್ಲ.

> ಅದೇ ರೀತಿ ನಾವು ನೋಡಬೇಕಾದರೆ ಯಾರು ನಿಜವಾದ ಕ್ರೈಸ್ತರು? ನಾವು ಯಾವುದೋ ಒಂದು ಧರ್ಮದಲ್ಲಿ ಇರುತ್ತೇವೆ, ನಂತರ ಆ ಧರ್ಮವನ್ನು ಮಾರಿಕೊಂಡು ಬಿಡುತ್ತೇವೆ (convert) ಆಗುತ್ತೇವೆ, ನಮ್ಮ ಹೆಸರನ್ನು ಬದಲಾಯಿಸಿಕೊಂಡು ಬೇರೆ ಹೆಸರನ್ನು ಇಟ್ಟುಕೊಂಡ ತಕ್ಷಣ ನಾವು ಕ್ರೈಸ್ತರಾಗಿ ಬಿಡುತ್ತೇವಾ ? ಸತ್ಯವೇದದಲ್ಲಿ ಏನನ್ನು ಓದುತ್ತೇವೆ?

**ಅಪೋಸ್ತಲರ ಕೃತ್ಯಗಳು 11:26** – "ಅವರು ಪೂರ್ತಿ ಒಂದು ವರ್ಷ ಸಭೆಯವರ ಸಂಗಡ ಕೂಡಿದ್ದು ಬಹು ಜನರಿಗೆ ಉಪದೇಶ ಮಾಡಿದರು. ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು". ಅಂದರೆ

> ಶಿಷ್ಯರಿಗೆ ಕ್ರೈಸ್ತರಂದು ಹೆಸರು ಬಂದಿತು, ಹಾಗಾದರೆ ಒಮ್ಮೆ ಹೆಸರನ್ನು ಬದಲಾವಣೆ ಮಾಡಿದ ತಕ್ಷಣ ಕ್ರೈಸ್ತರಾಗುವದಕ್ಕೆ ಸಾಧ್ಯವಿಲ್ಲ. ನಾವು ಕ್ರೈಸ್ತರಾಗಬೇಕೆಂದರೆ ಮೊದಲು ಶಿಷ್ಯರಾಗಬೇಕು, ಯಾರ ಶಿಷ್ಯರಾಗಬೇಕೆಂದರೆ ಯೇಸು ಕ್ರಿಸ್ತನ ಶಿಷ್ಯರಾಗಬೇಕು. ಯೇಸು ಕ್ರಿಸ್ತನ ಶಿಷ್ಯರೆಂದರೆ ಯಾರು ? ಹೇಗೆ ಕಂಡು ಹಿಡಿಯಬಹುದು ? ಹಾಗಾದರೆ ಗುರುಗಳ ಹತ್ತಿರ ಹೋಗಿ ತಿಳಿದುಕೊಳ್ಳೋಣ.

**ಯೋಹಾನ 8:31** – "ಆಗ ಯೇಸು ತನ್ನನ್ನು ನಂಬಿದ ಯೆಹೂದ್ಯರಿಗೆ ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿಯೂ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ, ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು".

> ದೇವರ ವಾಕ್ಯದಲ್ಲಿ ನೆಲೆಗೊಂಡಿರಬೇಕು ವಾಕ್ಯದಲ್ಲಿ ನೆಲೆಗೊಂಡಿರದೇ ಇದ್ದರೆ ನಿಜವಾಗಿಯೂ ಯೇಸು ಕ್ರಿಸ್ತನ ಶಿಷ್ಯರಾಗುವುದಕ್ಕೆ ಸಾಧ್ಯವೇ ಇಲ್ಲ. ಹಾಗಾದರೆ ಸತ್ಯವನ್ನು ತಿಳಿದುಕೊಳ್ಳಬೇಕು ಮತ್ತು ವಾಕ್ಯದಲ್ಲಿ ನೆಲೆಗೊಂಡಿರಬೇಕು.

>     ವಾಕ್ಯದಲ್ಲಿ ನೆಲೆಗೊಂಡಿರುವುದು ಎಂದರೆ ಏನು ?  ವಾಕ್ಯದ ಪ್ರಕಾರ ನಡೆಯುವುದೇ ಆಗಿದೆ.  ಸತ್ಯವನ್ನು ತಿಳಿದುಕೊಳ್ಳಬೇಕು ಮತ್ತು ಅದರಂತೆ ನಡೆಯುವವನೇ ನಿಜವಾದ ಕ್ರೈಸ್ತನು.  ಸತ್ಯವನ್ನು ತಿಳಿದುಕೊಳ್ಳುವುದು ಹೇಗೆಂದರೆ ಸತ್ಯವೇದ ಅಧ್ಯಾಯನ ಅತಿ ಮುಖ್ಯವಾದುದಾಗಿದೆ.  ಸತ್ಯವೇದ ಅಧ್ಯಾಯನ ಮಾಡುವುದು ಹೇಗೆ ಸ್ವಲ್ಪ ನೋಡೋಣ ! ಸತ್ಯವೇದ ಓದುವುದಕ್ಕೆ ಬೇರೆ ಬೇರೆ ವಿಧಗಳಿವೆ.

ಉದಾ:–(1) ಪ್ರತಿ ದಿನ ಸತ್ಯವೇದದಲ್ಲಿರುವ ಹಳೆಯ ಒಡಂಬಡಿಕೆಯಲ್ಲಿ 2 ಅಧ್ಯಾಯ, ಹೊಸ ಒಡಂಬಡಿಕೆಯಲ್ಲಿ 1 ಅಧ್ಯಾಯ ಓದುತ್ತಾ ಹೋದರೆ ನಾನು ಸತ್ಯವೇದವನ್ನು ಪೂರ್ತಿಯಾಗಿ ಓದಿ ಮುಗಿಸುವುದಕ್ಕೆ ಒಂದು ವರ್ಷ ಕಾಲ ಹಿಡಿಯುತ್ತದೆ.
ಉದಾ:–(2) ಇನ್ನೊಂದು ರೀತಿ ಸತ್ಯವೇದವನ್ನು ಕೇವಲ ಒಂದೇ ವಾರದಲ್ಲಿ ಓದಿ ಮುಗಿಸಬಹುದು ಅದು ಯಾವ ರೀತಿ ಅಂದರೆ, ನ್ಯೂಸ್ ಪೇಪರ್ ಓದುವ ರೀತಿಯಲ್ಲಿ.
ಉದಾ:–(3) ಹಾಗೇ ಬೆಳಗ್ಗೆ 9 ಗಂಟೆಯಿಂದ ಕುಳಿತುಕೊಂಡು ಸಂಜೆ 6 ಗಂಟೆಗಳ ವರೆಗೆ ಬಿಡದೆ ಓದುತ್ತಾ ಇದ್ದರೆ 7 ದಿನದಲ್ಲಿ ಸತ್ಯವೇದವನ್ನು ಪೂರ್ತಿಯಾಗಿ ಓದಿ ಮುಗಿಸಬಹುದು.
ಉದಾ:–(4) ಇನ್ನು ಹೇಳಬೇಕಾದರೆ 24 ಗಂಟೆಗಳ ಕಾಲ ಬಿಡದೆ ಓದುತ್ತಾ ಇದ್ದರೆ ಮೂರು ದಿನದಲ್ಲಿಯೂ ಸಹ ಸತ್ಯವೇದವನ್ನು ಓದಿ ಮುಗಿಸಬಹುದು.

>     ಕೆಲವರು ಸತ್ಯವೇದವನ್ನು ಹೇಗೆ ಓದುತ್ತಾರೆ ಅಂದರೆ ? ತುಂಬಾ ಸೋಂಬೇರಿಯಾಗಿದ್ದು ಕ್ರೈಸ್ತರ ಕ್ಯಾಲೆಂಡರ್‌ನಲ್ಲಿ ಮುದ್ರಿತ ವಾಗಿರುವ ವಾಕ್ಯವನ್ನು ಮಾತ್ರ ಓದಿ ಈ ದಿನದ ಆತ್ಮೀಕ ಆಹಾರ ದೇವರು ಕೊಟ್ಟಿದ್ದಾರೆ ಎಂದು ಸುಮ್ಮನಿರುತ್ತಾರೆ.  ಉಪ್ಪಿನಕಾಯಿ ಸೇವಿಸಿದರೆ ಸಾಕಾಗುತ್ತದಾ ದಿನದ ಊಟವಾದ ಹಾಗೆ ಹಾಗುತ್ತದಾ ? ಅಂತಹವರೇ ಇವರು !

>     ಇನ್ನು ಕೆಲವರು ಹೇಗಿದ್ದಾರೆ ಅಂದರೆ, ಮುಂಜಾನೆ ಎದ್ದ ನಂತರ ಸತ್ಯವೇದವನ್ನು ಕೈಯಲ್ಲಿ ಹಿಡಿದು ತೆಗೆಯುವುದಕ್ಕೆ ಮುಂಚೆಯೇ ದೇವರೇ ಈ ದಿನ ಒಳ್ಳೇ ವಾಕ್ಯ ಕೊಡು ಎಂದು ಹೇಳಿ ತೆಗೆಯೋದು, ಆಶೀವಾದ ವಾಕ್ಯ ಬಂದರೆ ದೇವರು ನನ್ನ ಜೊತೆ ಒಳ್ಳೆಯ ವಚನದ ಮೂಖಾಂತರ ಮಾತಾಡಿದ್ದಾರೆ ನನ್ನನ್ನು ಈ ದಿನ ಆಶೀರ್ವದಿಸಿದ್ದಾರೆ ಅಂದುಕೊಂಡು ಸುಮ್ಮನೆ ಇದ್ದು ಬಿಡುತ್ತಾರೆ. [ಒಬ್ಬನು ಕೆಲಸಕ್ಕೆ ಹೋಗುವುದಕ್ಕೆ ಮುಂಚೆ ಪ್ರಾರ್ಥನೆ ಮಾಡಿದ ನಂತರ ಸತ್ಯವೇದವನ್ನು ಓದುತ್ತಿದ್ದ, ಒಂದು ದಿನ ಸತ್ಯವೇದವನ್ನು ಓದಲು ತೆಗೆದಾಗ ಯೇಸು ಕ್ರೇಸ್ತನು ಪೇತ್ರನಿಗೆ ಹೇಳಿದ ಮಾತು ಬಂತು ಅದು ಸೈತಾನನೇ ನನ್ನನ್ನು ಬಿಟ್ಟು ತೊಲಗಿ ಹೋಗು ನಿನ್ನ ಆಲೋಚನೆ ಮನುಷ್ಯರದೇ ಹೊರತು ದೇವರದಲ್ಲ" ಆಗ ಅವನು ಮತ್ತೆ ಪ್ರಾರ್ಥನೆ ಮಾಡಿ ಮತ್ತೊಂದು ಬಾರಿ ಸತ್ಯವೇದವನ್ನು ತೆಗೆದು ಓದುತ್ತಾನೆ ಆಗ ಯೂದನು ಹೋಗಿ ನೇತು ಹಾಕಿಕೊಂಡ ವಾಕ್ಯ ಬಂದಿತು, ಅವನು ಈ ದಿನ ಏಕೆ ಈ ರೀತಿಯಾದ ವಾಕ್ಯವನ್ನು ದೇವರು ಕೊಡುತ್ತಿದ್ದಾರೆ ಎಂದು ತಿಳಿದು ನಾನು ಏನೋ ದೇವರಿಗೆ ವಿರುದ್ಧ ತಪ್ಪು ಮಾತಿದ್ದೇನೆಂದು ದೇವರೇ ನನ್ನ ತಪ್ಪುಗಳನ್ನು ಕ್ಷಮಿಸಿ ಎಂದು ಪ್ರಾರ್ಥನೆ ಮಾಡಿ, ದೇವರೇ ಒಳ್ಳೆ ವಾಕ್ಯವನ್ನು ಕೊಡಿ ಎಂದು ಸತ್ಯವೇದವನ್ನು ತೆಗೆದ ನೋಡಿದ ಆಗ ಬಂದ ವಾಕ್ಯ "ನೀನು ಹೋಗಿ ಹಾಗೆಯೇ ಮಾಡು" ಎಂದು ಬಂತು ಅವನು ತುಂಬಾ ಬೇರಸವಾಗಿ ಕೆಲಸಕ್ಕ ಹೋಗದೆ ಮನೆಯಲ್ಲೆ ಇದ್ದು ಬಿಟ್ಟ].  ಹೀಗೆ ನಮ್ಮ ಆಲೋಚನಯಂತೆ ಸತ್ಯವೇದವನನು ಓದಿದರೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

>     ದೇವರು ಸೃಷ್ಠಮಾಡಿದಂತಹ ಒಂದೊಂದು ದಿನದ ಸಮಯವೆಷ್ಟು ?
ಸಾಮಾನ್ಯವಾಗಿ ನಮ್ಮೆಲ್ಲರಿಗೂ ಬರುವಂತಹ ಆಲೋಚನೆ ದೇವರು ಸೃಷ್ಠಮಾಡಿರುವಂತಹ ಒಂದೊಂದು ದಿನದ ಸಮಹ 24 ಗಂಟೆಗಳು. ಹಾಗಾದರೆ 24 ಘಂಟೆಗಳು ಎಂದು ನಮಗೆ ಹೇಗೆ ಹೇಳುವುದಕ್ಕೆ ಸಾಧ್ಯ. ಅಂದರೆ ಸೂರ್ಯ ಉದಯವಾಗಿ ನಂತರ ಮತ್ತೆ ಉದಯವಾಗುವವರೆ 24 ಘಂಟೆಗಳು ಎಂದು ಲೆಕ್ಕ ಹಾಕಬಹುದು, ಅಥವಾ ಗಡಿಯಾರದ ಮೂಲಕ ಲೆಕ್ಕ ಹಾಕಬಹುದು ಗಡಿಯಾರ ಇಲ್ಲವಾದರೂ ಸೂರ್ಯ, ಚಂದ್ರರ ಮೂಲಕ ಲೆಕ್ಕ ಹಾಕಬಹುದು.

>     ಹಾಗಾದರೆ ಸೂರ್ಯ ಹಾಗೂ ಚಂದ್ರನನ್ನು ದೇವರು ಸೃಷ್ಠಿ ಮಾಡಿದ್ದು ಎಷ್ಟನೇ ದಿನ ?
**<u>ಆದಿಕಾಂಡ 1:14,15 </u>–** ಈ ವಾಕ್ಯದಲ್ಲಿ ದೇವರು ತಿಳಿಯಪಡಿಸಿರುವುದೇನೆಂದರೆ ಸೂರ್ಯ, ಚಂದ್ರನನ್ನು ಉಂಟು ಮಾಡಿದ್ದು 4ನೇ ದಿನ. ಹೀಗಿರುವಾಗ ಮೊದಲ ಮೂರು ದಿನಗಳು ಹೇಗಾಯಿತು ಸೂರ್ಯ, ಚಂದ್ರನೇ 4ನೇ ದಿನದಲ್ಲಿ ಉಂಟಾಯಿತಲ್ಲಾ.  ನಾವು ನೆನಸುವ ಹಾಗೆ ದೇವರಿಗೆ ಒಂದು ದಿನವೆಂದರೆ 24 ಘಂಟೆಗಳ ಕಾಲವಲ್ಲವೆಂದು ಸತ್ಯವೇದ ಬೋಧಿಸುತ್ತದೆ.

>     ಈ ಸೃಷ್ಟಿಯ ಒಂದೊಂದು ದಿನಗಳು ಎಷ್ಟು ಅಂದರೆ ಸತ್ಯವೇದದಲ್ಲಿ ನೋಡುವಾಡು 7000 ವರ್ಷಗಳು.

> ಹೇಗೆ ಹೇಳಬಹುದು ಅಂದರೆ, ದೇವರು ವಿಶ್ರಾಂತಿ ತೆಗೆದುಕೊಂಡದ್ದು 7ನೇ ದಿನವೆಂದು ಸತ್ಯವೇದ ತಿಳಿಸುತ್ತದೆ.

> ಆದಾಮ ಪಾಪ ಮಾಡಿದಂದಿನಿಂದ ಆ 7ನೇ ದಿನ ಆರಂಭವಾಯಿತು ಅದು ಒಂದು ಕಾಲದಲ್ಲಿ ಮುಕ್ತಾಯವಾಗುತ್ತದೆ. ಆದಾಮನನ್ನು ಸೃಷ್ಟಿ ಮಾಡಿದಂದಿನಿಂದ ಇವತ್ತಿನವರೆಗೆ ಎಷ್ಟು ಸಾವಿರ ವರ್ಷ ಆಯಿತು ಅಂತಾ ಸತ್ಯವೇದದಲ್ಲಿ ಪುರಾವೆ ಕೊಟ್ಟಿದ್ದಾರೆ. ಇದು ಎಷ್ಟು ಅಂದರೆ 7000 ವರ್ಷಗಳು, ಇದನ್ನು ಈಗ ನಿಜವೆಂದು ಸಾದಿಸಲು ಸಾಧ್ಯವಿಲ್ಲ. ಏಕೆಂದರೆ ಇದು ಒಂದೇ ವಚನದಲ್ಲಿ ಕೊಟ್ಟಿಲ್ಲ, ಇದು 49 ಪಾಠಗಳನ್ನೊಳಗೊಂಡ ಸರಪಣಿಯನ್ನು ಕೊಟ್ಟಿದ್ದಾರೆ, ಇದಕ್ಕೆ ಬೇರೆ ಪಾಠವನ್ನು ಇಟ್ಟಿದ್ದೇವೆ. "ಸತ್ಯವೇದದಲ್ಲಿ ಇರುವಂತಹ ಕಾಲಗಣನೆ" ಎಂಬ ಪಾಠದಲ್ಲಿ ನಿಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಒಂದೊಂದು ದಿನ 7000 ವರ್ಷಗಳು ಅಂದ ಮೇಲೆ 6 ದಿನಗಳನ್ನು ಸೃಷ್ಠಿಮಾಡಿ 7ನೇ ದಿನ ವಿಶ್ರಾಂತಿ ತೆಗೆದುಕೊಂಡರು ಎಂದು ಸತ್ಯವೇದ ಭೋದಿಸುವಾಗ, ದೇವರು ಸೃಷ್ಟಿ ಮಾಡಿರುವ 6 ದಿನಗಳು ನಮಗೆ ಎಷ್ಟು ದಿನಗಳಂತೆ ಕಾಣಬರುತ್ತದೆ ಎಂದರೆ 6 X 7000 = 42,000 ವರ್ಷಗಳನ್ನು ಸೂಚಿಸುತ್ತದೆ. 6 ದಿನ ದೇವರು ಸೃಷ್ಠಿಮಾಡಿ ಕೊನೆಯ 7ನೇ ದಿನ, ನಮಗೆ 23,000ನೇ ಸಾವಿರ ವರ್ಷದಲ್ಲಿ ದೇವರು ವಿಶ್ರಾಂತಿ ತೆಗೆದುಕೊಂಡರು ಇದನ್ನೇಲ್ಲಾ ಮುಂದಿನ ಪಾಠಗಳಲ್ಲಿ ನಿಮಗೆ ಸಂದೇಹ ವಿಲ್ಲದೆ ಸ್ಪಸ್ಟವಾಗಿ ತಿಳಿದುಬರುತ್ತದೆ ಸಂದೇಹವೇ ಇಲ್ಲ.

> ಇದಕ್ಕೆ ಸತ್ಯವೇದದಲ್ಲಿ ಏನಾದರೂ ಆಧಾರ ವಿದೆಯೇ? ಎಂದು ಕೇಳಿದರೆ ನಿಜವಾಗಿಯೂ ಇದೆ. ಹೆಗೆಂದರೆ ಸತ್ಯವೇದದಲ್ಲಿ ಬರುವಂತ ದಿನಗಳು ಮನುಷ್ಯರು ಮಾಡಿರುವಂತ 24 ಘಂಟೆಗಳನ್ನೊಳಗೊಂಡ ದಿನಗಳಲ್ಲ.
ಉದಾ :– ನಮ್ಮ ಯೇಸು ಕ್ರಿಸ್ತನಿಗೆ ಒಂದು ದಿನ ಅಂದರೆ ನಮಗೆ 1000 ವರ್ಷಗಳೆಂದು ಸತ್ಯವೇದ ಭೋದಿಸುತ್ತದೆ.
<u>**2ನೇ ಪೇತ್ರ 3:8–**</u> "ಪ್ರಿಯರೇ, ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರ್ಷಗಳಂತೆಯೂ ಸಾವಿರ ವರ್ಷಗಳು ಒಂದು ದಿನದಂತೆಯೂ ಇದೆ ಎಂಬುದನ್ನು ಮಾತ್ರ ಮರೆಯಬೇಡಿ" ಹೌದು ನಾವು ಇದನ್ನು ಮರೆತು ಬಿಡಬಾರದೆಂದು ಬರೆದಿದ್ದಾರೆ.

> ಯೇಸು ಕ್ರೀಸ್ತನಿಗೆ ಒಂದು ದಿನ ಅಂದರೆ ನಮಗೆ 1000 ವರ್ಷಗಳಂತೆ ಇರುವಾಗ, ಹಾಗಾದರೆ ಪ್ರವಾದಿಗೆ ಒಂದು ದಿನವೆಂದರೆ ಎಷ್ಟು ?
<u>**ಯೆಹೆಜ್ಕೇಲ 4:6**</u> – "ಅಷ್ಟು ದಿವಸಗಳನ್ನು ತೀರಿಸದಿ ಮೇಲೆ ಬಲ ಮಗ್ಗುಲಲ್ಲಿ ಮಲಗಿಕೊಂಡು ಯೆಹೂದ ವಂಶದವರ ಅಧರ್ಮವನ್ನು ಹೊತ್ತುಕೊಳ್ಳಬೇಕು, ವರುಷ ಒಂದಕ್ಕೆ ಒಂದು ದಿನದ ಮೇರೆಗೆ ನಾಲ್ವತ್ತು ದಿನ ಅವರ ಅಧರ್ಮವನ್ನು ಹೊತ್ತು ಕೊಳ್ಳಬೇಕೆಂದು . . . . . ." ಹಾಗಾದರೆ ದೇವರು, ಪ್ರವಾದಿಗೆ ಕೊಟ್ಟಿರುವಂತಹ ಸಮಯ ಒಂದು ದಿನ ನಮಗೆ <u>ಒಂದು ವರುಷಕ್ಕೆ</u> ಸಮವಾಗಿದೆ ಎಂದು ಸತ್ಯವೇದ ಬೋದಿಸುತ್ತದೆ.

> ಸತ್ಯವೇದದಲ್ಲಿ ಒಂದು ದಿನ ಅಂತಾ ಹೇಳಿದ ತಕ್ಷಣ ಎಲ್ಲಾ ಕಡೆ ಅದು 24 ಘಂಟೆಗಳಿಗೆ ಸಮವೆಂದು ಅರ್ಥಮಾಡುವ ಹಾಗಿಲ್ಲ. ಇನ್ನೊಂದು ಕಡೆಯಲ್ಲಿ ಸತ್ಯವೇದ ಹೇಳುವುದೇನೆಂದರೆ "ನೋಹನ ದಿನಗಳಲ್ಲಿ" ಎಂದು ಹಾಗಾದರೆ ಏನು ಅರ್ಥ ನೋಹನು ಇದ್ದದ್ದು 24 ಘಂಟೆಗಳಿಗೆ ಸಮನಾಗಿದೆಯೇ ?

> ನೋಹನು ಇದ್ದಂತ ದಿನಗಳು 950 ವರ್ಷಗಳು ಎಂದು ಸತ್ಯವೇದ ತಿಳಿಸುತ್ತದೆ. ಅದೇ ರೀತಿ ಅರ್ಥ ಮಾಡಿಕೊಳ್ಳಬೇಕು ಸತ್ಯವೇದವನ್ನು ಸ್ಪಷ್ಟವಾಗಿ ಓದಬೇಕು. [ ಇದು ಪ್ರವಾದಿಗೆ ಹೇಳಿರುವುದು]

> ಇಸ್ರಾಯೇಲ್ಯರಿಗೆ ಒಂದು ದಿನವೆಂದರೆ ಎಷ್ಟು ?
<u>**ಇಬ್ರಿಯರಿಗೆ 3:8,9**</u> – "ನಿಮ್ಮ ಹಿರಿಯತು ದೇವರಿಗೆ ಕೋಪವನ್ನೆಬ್ಬಿಸಿದ ಸ್ಥಳದಲ್ಲಿ, ಅರಣ್ಯದೊಳಗೆ ದೇವರನ್ನು ಪರೀಕ್ಷಿಸಿದ ದಿನದಲ್ಲಿ ಮಾಡಿದಂತೆ ನಿಮ್ಮ ಹೃದಯಗಳನ್ನು ಕಠಿಣ ಮಾಡಿಕೊಳ್ಳಬೇಡಿರಿ". ಅವರು ಅರಣ್ಯದಲ್ಲಿ ನನ್ನನ್ನು ಪರೀಕ್ಷಿಸಿ ಶೋಧಿಸಿ 40 ವರುಷ ನಾನು ನಡೆಸಿದ ಕೃತ್ಯಗಳನ್ನು ನೋಡಿದರು. [ದೇವರು ಇಸ್ರಾಯೇಲ್ಯರ ಬಗ್ಗೆ ಮಾತನಾಡುವಾಗ ಒಂದು ದಿನವನ್ನು 40 ವರ್ಷಕ್ಕೆ ಸಮ ಮಾಡಿ ಮಾತನಾಡಿದ್ದಾರೆ]

> ಅದೇ ರೀತಿ ಸತ್ಯವೇದದಲ್ಲಿ ಒಂದು ದಿನ ಅಂದರೆ ಎಲ್ಲಾ ಕಡೆ 24 ಘಂಟೆ ಎಂದು ಬರುವುದಿಲ್ಲ. ಎಲ್ಲಾ ಕಡೆ 1000 ವರ್ಷವೆಂದಾಗಲಿ ಬರುವುದಿಲ್ಲ. ಅದು ಎಲ್ಲಾ ಬೇರೆ ಬೇರೆ ಅದನ್ನು ನಾವು "ಸತ್ಯವೇದ ಅಧ್ಯಾಯನ" ಎಂದ ಪಾಠದಲ್ಲಿ ನಿಮಗೆ ತಿಳಿದು ಬರುತ್ತದೆ. ಕೆಳಗಿನ ವಾಕ್ಯಗಳೆಲ್ಲಾ ಆದಿಕಾಂಡದ ಮೊದಲನೆಯ ಅಧ್ಯಾಯದಲ್ಲಿ ಬರುವಂತ ಪ್ರಶ್ನೆಗಳಾಗಿವೆ.

<u>**1) ಆದಿಕಾಂಡ 1:4**</u> – "ದೇವರು ಮೊದಲನೆಯ ದಿನವನ್ನು ಒಳ್ಳೇದೆಂದು ನೋಡಿದರು.

**2) ಆದಿಕಾಂಡ 1:6 –** "ದೇವರು ಎರಡನೇಯ ದಿನವನ್ನು ಒಳ್ಳೆದೆಂದು ನೋಡಲಿಲ್ಲಾ ?

**3) ಆದಿಕಾಂಡ 1:12,13 –** "ದೇವರು ಮೂರನೇಯ ದಿನವನ್ನು ಒಳ್ಳೇದೆಂದು ನೋಡಿದರು.

**4) ಆದಿಕಾಂಡ 1:18,19 –** "ದೇವರು ನಾಲ್ಕನೇಯ ದಿನವನ್ನು ಒಳ್ಳೇದೆಂದು ಹೇಳಿದ್ದಾರೆ.

**5) ಆದಿಕಾಂಡ 1:21,23 –** "ದೇವರು ಐದನೇಯ ದಿನವನ್ನು ಸಹ ಒಳ್ಳೇದೆಂದು ನೋಡಿದರು.

**6) ಆದಿಕಾಂಡ 1:31 –** "ದೇವರು ಆರನೇಯ ದಿನವನ್ನು ಒಳ್ಳೇದೆಂದು ನೋಡಲಿಲ್ಲ

**7) ಆದಿಕಾಂಡ 2:1–3 –** "ದೇವರು ತನ್ನ ಸೃಷ್ಠಕಾರ್ಯವನ್ನು ಮುಗಿಸಿ ಆ ಏಳನೇಯ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದರು. ಆದರೆ ಒಳ್ಳೇದೆಂದು ಹೇಳಲಿಲ್ಲಾ.

> ದೇವರು ಪರಿಶುದ್ಧ ದಿನ ಎಂದು ಆಶೀರ್ವದಿಸಿದರು ಎಂದು ಬರೆದಿದೆ. ಆದರೆ ಒಳ್ಳೇದು ಎಂದು ಕಂಡರು ಎಂತಾಗಲಿ ಇಲ್ಲ. ದೇವರು 2ನೇ ದಿನಕ್ಕೆ ಮತ್ತು 7ನೇ ದಿನಕ್ಕೆ ಏನೂ ಹೇಳಲ್ಲಿಲ್ಲ ಏಕೆ ? ಮರೆತು ಹೋದರಾ ? ದೇವರು ವಿಶ್ರಾಂತಿಯನ್ನು ಹೊಂದಿದ ದಿನವನ್ನು ಒಳ್ಳೆ ದಿನವೆಂದು ಹೇಳಬಹುದಿತ್ತಲ್ಲಾ ? ಉದಾ :– ನಮಗೆ ಭಾನುವಾರ ಬಂದರೆ ಕೆಲಸದಿಂದ ವಿಶ್ರಾಂತಿ ಸಿಕ್ಕಿತಲ್ಲಾ ಎಂದು ಸಂತೋಷಪಡುತ್ತೇವೆ, ಒಳ್ಳೆ ದಿನವೆಂದು ಅನಿಸುತ್ತದೆ. ಹಾಗೆಯೇ ದೇವರು ಸಹ ವಿಶ್ರಾಂತಿ ದಿನವನ್ನು ಒಳ್ಳೇದೆಂದು ಹೇಳಬಹುದಿತ್ತಾಲ್ಲಾ, ಏಕೆ 2ನೇ ದಿನಕ್ಕೆ ಮತ್ತು 7ನೇ ದಿನಕ್ಕೆ ಏನೂ ಹೇಳಲ್ಲಿಲ್ಲ ? ಮರೆತು ಹೋದರಾ ? ಹಾಗೆ ನೋಡುವಾಗ ವಾಕ್ಯ ಹೇಳುತ್ತದೆ "ಇಸ್ರಾಯೇಲಿನ ದೇವರು ತೂಕಡಿಸುವು ಇಲ್ಲ, ನಿದ್ರಿಸುವುದು ಇಲ್ಲಾ ಇಂತಹಾ ದೇವರು ಮರೆತು ಹೋಗುವುದಕ್ಕೆ ಸಾಧ್ಯವೇ ಇಲ್ಲ. ಹಾಗಾದರೆ ದೇವರು 2 ದಿನಕ್ಕೆ ಏನು ಹೇಳಲಿಲ್ಲವಾಗಿದ್ದಲ್ಲಿ ಏನೋ ಕಾರಣ ಇರಬೇಕು ಆ ಕಾರಣವನ್ನು ನಮ್ಮ ಸತ್ಯವೇದದಲ್ಲಿ ಹುಡುಕಬೇಕು.

> ಮೊದಲನೆಯದಾಗಿ ದೇವರು 2ನೇ ದಿನಕ್ಕೆ ಏಕೆ ಒಳ್ಳೆದೆಂದು ಹೇಳಲಿಲ್ಲವೆಂದು ನೋಡೋಣ ?

**ಆದಿಕಾಂಡ 1:8 –** " ದೇವರು ಆ ಗುಮಟಕ್ಕೆ ಆಕಾಶವೆಂದು ಹೆಸರಿಟ್ಟರು, ಹೀಗೆ ಸಾಯಂಕಾಲವು ಪ್ರಾತಃಕಾಲವು ಆಗಿ 2ನೇಯ ದಿನವಾಯಿತು". 2ನೇ ದಿನ ದೇವರು ಸೃಷ್ಟಿಮಾಡಿದ್ದು ಆಕಾಶವನ್ನು, ಆಕಾಶವನ್ನು ನೋಡೋಕೆ ತುಂಬಾ ಚೆನ್ನಾಗಿದೆ. ಆದಿಯಲ್ಲಿ ದೇವರು ಭೂಮಿ, ಆಕಾಶವನ್ನು ಉಂಟು ಮಾಡಿದನು ಎಂದು **ಆದಿಕಾಂಡ 1:1 –** ರಲ್ಲಿ ತಿಳಿಯಪಡಿಸಿದ್ದಾರೆ. ಮತ್ತೊಂದು ಕಡೆಯಲ್ಲಿ ಆಕಾಶವನ್ನು 2ನೇ ದಿನದಲ್ಲಿ ಸೃಷ್ಠಿ ಮಾಡಿದ್ದಾರೆ ಎಂದು ಓದುತ್ತೇವೆ. ಅಂದರೆ ಹೇಗೆ ?

> 2 ದಿನಗಳಲ್ಲಿಯೂ ದೇವರು ಆಕಾಶವನ್ನೇ ಉಂಟುಮಾಡಿದ್ದಾರಾ ? ಅಂದರೆ ಅರ್ಥವೇನು ? ಇದನ್ನು ಮುಂದಿನ ಪಾಠದಲ್ಲಿ ನೋಡೋಣ ! ಅದಕ್ಕೆ ಅನೇಕ ರಹಸ್ಯಗಳು ಇದೆ. ಮುಖ್ಯವಾಗಿ ನಾವು ನೋಡುವಾಗ ದೇವರು ಆಕಾಶಕ್ಕೆ ಏಕೆ ಚೆನ್ನಾಗಿದೆ ಎಂದು ಹೇಳಲಿಲ್ಲ, ಅಂದರೆ ಇದಕ್ಕೆ ಉತ್ತರ ಸತ್ಯವೇದದಲ್ಲಿರುವ ಹಳೆಯ ಒಡಂಬಡಿಕೆಯಲ್ಲಿ ಸಿಕ್ಕುವುದಿಲ್ಲ. ಅದಕ್ಕೆ ಉತ್ತರ ಹೊಸ ಒಡಂಬಡಿಕೆಯಲ್ಲಿ ಉಡುಕಿದರೆ ಸಿಗುತ್ತದೆ.

**ಎಫೆಸದವರಿಗೆ 2:2** – "ನೀವು ಪೂರ್ವದಲ್ಲಿ ಅಪರಾದಗಳನ್ನೂ, ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯು ಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದು ಕೊಂಡಿರಿ".

> ಹಾಗಾದರೆ ವಾಯು ಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿ ಅಂದರೆ ಯಾರು ? ಇವರು ಏನು ಮಾಡುತ್ತಾರೆ ?

ಮೇಲಿನ ವಾಕ್ಯದಲ್ಲಿ ನಾವು ನೋಡುವಾಗ "ವಾಯು ಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ" ಎಂದು ಓದುತ್ತೇವೆ. ಅಂದರೆ ದುರಾತ್ಮ ಎಂದರ್ಥ. ಈ ದುರಾತ್ಮ ಯಾರು ? ಸೈತಾನನಲ್ಲವೇ ! ಈ ಸೈತಾನನು ಏನನ್ನು ಮಾಡುತ್ತಿದ್ದಾನೆ ಅಂದರೆ ಯಾರು ದೇವರ ಮೇಲೆ ನಂಬಿಕೆ ಇಟ್ಟಿರುವದಿಲ್ಲವೋ ಆ ಜನಗಳನ್ನು ಅವಿಧೇಯತೆಗೆ ಪ್ರೇರೆಪಣೆ ಮಾಡುತ್ತಿದ್ದಾನೆ.

> ಸೈತಾನನು ಈ ದಿನಗಳಲ್ಲಿ ಎಲ್ಲಿದ್ದಾನೆ ಅಂದರೆ ವಾಯು ಮಂಡಲದಲ್ಲಿ (ಆಕಾಶ ಮಂಡಲದಲ್ಲಿ), ಆದುದರಿಂದ ದೇವರಿಗೆ ಮೊದಲೇ ಗೊತ್ತಿತ್ತು ಇವನು ಎಷ್ಟು ಕೆಟ್ಟವನಾಗಿದ್ದಾನೆ, ಅಂತ್ಯದಲ್ಲಿ ಇವನ ಗತಿ ಏನಾಗುತ್ತದೆ ಎಂದು ಮತ್ತು ಮುಂದಿನ ಕಾಲದಲ್ಲಿ ಸೈತಾನನಡ ಮತ್ತು ಬಿದ್ದುಹೋದ ದೇವದೂತರುಗಳು ಅಲ್ಲಿಂದಲೇ ಆಳ್ವಿಕೆ ಮಾಡೋದಕ್ಕೆ ಶರು ಮಾಡುತ್ತಾರೆ ಎಂದು. ಆದಕಾರಣ ದೇವರು 2ನೇ ದಿನವನ್ನು ಒಳ್ಳೇದು ಎಂದು ಹೇಳಲ್ಲಿಲ್ಲಾ. ಹೀಗೆ ಹಳೆ ಬಡಿಕೆಯಲ್ಲಿ ಹೇಳಿರುವ ಪ್ರಶ್ನೆಗೆ ಹೊಸ ಒಡಂಬಡಿಕೆಯಲ್ಲಿ ಉತ್ತರವನ್ನು ದೇವರು ಬರೆಯಿಸಿದ್ದಾರೆ. ಈ ಕಾರಣದಿಂದಲೇ ದೇವರು 2ನೇ ದಿನಕ್ಕೆ ಒಳ್ಳೆದೆಂದು ಹೇಳಲಿಲ್ಲ.

> **ಯೋಬನು – 15:15** ಆಹಾ, "ಆಹಾ ದೂತರಲ್ಲಿಯೂ ಆತನು ನಂಬಿಕೆ ಇಡುವುದಿಲ್ಲ" ಏಕೆಂದರೆ ದೇವರ ದೃಷ್ಠಯಲ್ಲಿ ಆಕಾಶವು ನಿರ್ಮಲವಾಗಿರದು. ಈ ಕಾರಣದಿಂದಾಗಿ ದೇವರು 2ನೇ ದಿನಕ್ಕೆ ಒಳ್ಳೇದು ಎಂದು ಹೇಳಲಿಲ್ಲ.

> ಅದೇ ರೀತಿ 7ನೇ ದಿನಕ್ಕೆ ಏಕೆ ಒಳ್ಳೇದು ಎಂದು ದೇವರು ಹೇಳಲಿಲ್ಲ ?

ಒಂದೊಂದು ದಿನ ದೇವರು ಸೃಷ್ಠಿ ಮಾಡಿದ ನಂತರ ದಿನದ ಕೊನೆಯಲ್ಲಿ ಇದು ಒಳ್ಳೇದು ಎಂದು ಹೇಳಿದರು. ಹೀಗಿರುವಾಗ ದೇವರ ದೃಷ್ಠಿಯಲ್ಲಿ ಒಂದು ದಿನ 24 ಘಂಟೆಗಳಲ್ಲದೆ ಇರುವುದರಿಂದ 7ನೇ ದಿನ ಇನ್ನೂ ಪೂರ್ತಿಯಾಗಿಲ್ಲ, ಏಕೆಂದರೆ ಆದಾಮನಿಂದ ಈಗಿನ ವರೆಗೆ 6 ಸಾವಿರ ವರ್ಷಗಳು ತುಂಬಿ 7ನೇ ಸಾವಿರ ವರ್ಷ ಇನ್ನೂ ನಡೆಯುತ್ತಿದೆ, ಈ ಕಾರಣದಿಂದ ದೇವರು 7ನೇ ದಿನವನ್ನು ಒಳ್ಳೇದೆಂದು ಹೇಳಲಿಲ್ಲ. 7ನೇ ದಿನದ ಅಂತ್ಯದಲ್ಲಿ ಒಳ್ಳೇದೆಂದು ಹೇಳಬಹುದು. ಇದರಲ್ಲೇ ನಮಗೆ ಗೊತ್ತಾಗುತ್ತದೆ ತಂದೆ ದೇವರಿಗೆ ಒಂದು ದಿನವೆಂದರೆ ನಮಗೆ 7000 ವರ್ಷಗಳೆಂದು.

> ಸತ್ಯವೇದವನ್ನು ನಾವು ಅನೇಕ ಬಾರಿ ಓದುತ್ತೇವೆ ಆದರೂ ಅದರ ಅರ್ಥ ಪೂರ್ತಿಯಾಗಿ ನಮಗೆ ಏಕೆ ಗೊತ್ತಿರಲಿಲ್ಲವೆಂದರೆ ಸತ್ಯವೇದವನ್ನು ಓದುವುದಕ್ಕೂ ಅದನ್ನು ಅಧ್ಯಾಯನ ಮಾಡುವುದಕ್ಕೂ ಬಹಳ ವ್ಯತ್ಯಾಸ ವಿದೆ. ಸಾಮಾನ್ಯವಾಗಿ ಆದಿಕಾಂಡದಲ್ಲಿರುವ ಒಂದನೆ ಅಧ್ಯಾಯದಲ್ಲಿರುವಂತ ವಿಷಯಗಳನ್ನೇ ನಾವು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದಿದ್ದರೆ, ಪೂರ್ತಿಯಾಗಿ ಸತ್ಯವೇದವನ್ನು ಅರ್ಥಮಾಡಿಕೊಳ್ಳಲು ಹೇಗೆ ತಾನೇ ಸಾಧ್ಯ ? ನಾನು ಇಷ್ಟು ದಿನ ಏನು ಮಾಡುತ್ತಿದ್ದೆ ಅಂದರೆ ಇಂಗ್ಲೀಷ್‌ನಲ್ಲಿ ಹೇಳುತ್ತಾರೆ "We were Reading the Bible, but we are not Studying the Bible" ಸತ್ಯವೇದವನ್ನು ಓದುವುದಕ್ಕೂ ಅದನ್ನು ಅಧ್ಯಾಯನ ಮಾಡುವುದಕ್ಕೂ ಬಹಳ ವ್ಯತ್ಯಾಸ ವಿದೆ. ಉದಾ: – ಶಾಲೆಯಲ್ಲಿ ಯಾವ ಮಕ್ಕಳು ಹೆಚ್ಚಾಗಿ ಪಾಠವನ್ನು ಓದುತ್ತಾರೋ ಅಂತಹವರೇ ಮೊದಲು ಬರುವುದಕ್ಕೆ ಸಾಧ್ಯ. ಆದರೆ ದೇವರ ಪುಸ್ತಕದಲ್ಲಿ ಆ ರೀತಿ ಇಲ್ಲ, ಯಾರು ಹೆಚ್ಚಾಗಿ ಹೋದುತ್ತಾರೋ ಅವರು ಮೊದಲು ಬರುವುದಕ್ಕೆ ಸಾಧ್ಯವಿಲ್ಲ ಏಕೆಂದರೆ ಓದುವುದರ ಜೊತೆಗೆ ಅಧ್ಯಾಯನ ಮಾಡಬೇಕು.

> ಹೇಗೆ ಸತ್ಯವೇದವನ್ನು ಅಧ್ಯಾಯನ ಮಾಡುವುದು ?

ಮೊದಲು ನಾವು ಕಂಡು ಹಿಡಿಯಬೇಕಾಗಿರುವುದು ಸತ್ಯವೇದವನ್ನು ದೇವರು ಹೇಗೆ ಬರೆಯಿಸಿದ್ದಾರೆಂದು. ದೇವರು ಮೊದಲು ಸತ್ಯವೇದವನ್ನು ಯಾರಿಗೆ ತಿಳಿಯ ಪಡಿಸಿದರು?

**ಯೆಶಾಯ 28:9,10** – " ಇವರು ಅರಚಿಕೊಳ್ಳುವುದೇನೆಂದರೆ ಇವನು ಯಾರಿಗೆ ಜ್ಞಾನವನ್ನು ಭೋದಿಸುತ್ತಾನೆ ? ಇವನು ಯಾರಿಗೆ ಯೆಹೋವನ ಮಾತನ್ನು ತಿಳಿಯಪಡಿಸುತ್ತಾನೆ ? ಆಜ್ಞೆಯ ಮೇಲೆ ಆಜ್ಞೆ , ಆಜ್ಞೆಯ ಮೇಲೆ ಆಜ್ಞೆ , ಸೂತ್ರದ ಮೇಲೆ ಸೂತ್ರ , ಸೂತ್ರದ ಮೇಲೆ ಸೂತ್ರ ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪ ಪ್ರಕಟಿಸುತ್ತಾನಲ್ಲಾ" ಎಂಬುದು.

> ಸತ್ಯವೇದದಲ್ಲಿ ಹಾಲು ಬೋಧನೆಗಳಿವೆ, ಅದೇ ರೀತಿ ಗಟ್ಟಿಯಾದ ಬೋಧನೆ ಸಹ ಇದೆ.

ಹಾಲು ಬೋಧನೆ ಎಂದರೇನು ? ಮತ್ತು ಗಟ್ಟಿಯಾದ ಬೋಧನೆ ಎಂದರೇನು ?

**ಇಬ್ರಿಯರಿಗೆ 5:12 –** " ಕಾಲವನ್ನು ನೋಡಿದರೆ ನೀವು ಈಗಾಗಲೇ ಬೋಧಕರಾಗಬೇಕಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲ ಪಾಠಗಳನ್ನು ಕಲಿಸಿಕೊಡಬೇಕಾಗಿದೆ. ನೀವು ಹಾಲು ಕುಡಿಯುವವರೇ ಹೊರತು ಗಟ್ಟಿಯಾದ ಆಹಾರ ತಿನ್ನತಕ್ಕವರಲ್ಲ" ಎಂದು ಅಪೋಸ್ತಲನಾದ ಪೌಲನು ಸಭೆಯವರಿಗೆ ಬರೆದಿದ್ದಾರೆ.

> ಅಪೋಸ್ತಲನಾದ ಪೌಲನು ಹೇಳಿರುವ ಗಟ್ಟಿಯಾದ ಆಹಾರ ವೆಂದರೇನು, ಅದು ಮೂಲ ಉಪದೇಶವಾಗಿದೆ. ಅಂದರೆ ಯೇಸು ಕ್ರೀಸ್ತನನ್ನು ನಂಬಿರಿ, ಸಭೆಗೆ ಸರಿಯಾಗಿ ಬನ್ನಿರಿ, ಪ್ರಾರ್ಥನೆ ಚೆನ್ನಾಗಿ ಮಾಡಿರಿ ಎಂಬದನ್ನು ಮೂಲ ಉಪದೇಶ ಬಿಟ್ಟು, ಹೀಗೆ ಹೇಳುವಂತವರು ಹೆಸರಿಗೆ ಮಾತ್ರ ಕ್ರೈಸ್ತರಾಗಿರುವರು. ಅವರ ಹಾಗೆ ಏಳೀದ್ದನ್ನೇ ಮತ್ತೆ ಮತ್ತೆ ಹೇಳದೆ ಪೂರ್ಣ ಜ್ಞಾನದ ಕಡೆಗೆ ಹೋಗಬೇಕು. ಇದೇ ಗಟ್ಟಿಯಾದ ಆಹಾರ. ನಾವು ಗಟ್ಟಿಯಾದ ಆಹಾರ ಬಿಡದೆ ತಿನ್ನಬೇಕು. ಪ್ರತಿ ದಿನ ಗಟ್ಟಿಯಾದ ಆಹಾರ ತಿಂದರೆ ಪೂರ್ಣಜ್ಞಾನದ ಕಡೆಗೆ ದೇವರು ಕರೆದೊಯ್ಯುತ್ತಾರೆ.

ಉದಾ :– ನಾವು ಪ್ರತಿದಿನ ಹಾಲನ್ನೇ ಕುಡಿದರೆ ಏನು ಬಲ ಬರುತ್ತದೆ, ಎಲ್ಲಾ ರೀತಿಯ ಪೌಷ್ಠಿಕ ಆಹಾರ ತಿಂದರೆ ಮಾತ್ರವೆ ಬಲ ಬರಲು ಸಾಧ್ಯ., ಗಟ್ಟಿಯಾದ ಆಹಾರವನ್ನು ತಿನ್ನುವುದಕ್ಕೆ ಕಲಿಯಬೇಕು. ಹೀಗೆ ಗಟ್ಟಿಯಾದ ಆಹಾರ ತಿಂದರೆ ನಮಗೆ ಬಲ ಬರುತ್ತದೆ. ಕ್ರೀಸ್ತನ

ಸಾರೂಪ್ಯವನ್ನು ಹೊಂದ ಬೇಕಾದರೆ ಗಟ್ಟಿಯಾದ ಆಹಾರವನ್ನು ಮಾತ್ರ ತಿನ್ನಬೇಕು, ಇಂತಹವರಿಗೆ ದೇವರು ಸತ್ಯವೇದವನ್ನು ತಿಳಿಸಿಕೊಡುತ್ತಾರೆ. ಹೇಗಂದರೆ.

**ಯೆಶಾಯ 28:10,11** – "ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ"ವಾಗಿ ಬೋಧಿಸುತ್ತಾರೆ.

> ನಾವು ಸ್ಪಷ್ಟವಾಗಿ ಆದಿಕಾಂಡದಿಂದ ಪ್ರಕಟಣೆಯವರೆಗೆ ತಲೆಕೆಳಗೆ ಮಾಡಿ ಓದುತ್ತೇನೆ ಅಂದರೂ ಸಹ ಸತ್ಯವೇದ ಅರ್ಥವಾಗುವುದಿಲ್ಲ. ಕೆಲವರು ಸತ್ಯವೇದ ತಲೆಗೆ ಅಂಟುತ್ತಿಲ್ಲ ಅಂದುಕೊಂಡು ಸತ್ಯವೇದವನ್ನು ತಲೆದಿಂಬಿನ ಕೆಳಗೆ ಇಟ್ಟುಕೊಂಡು ಮಲಗಿಕೊಳ್ಳುತ್ತಾರೆ, ತಲೆದಿಂಬಿನ ಕೆಳಗಡೆ ಇಟ್ಟುಕೊಂಡರೆ ತಲೆಗೆ ಅತ್ತುತ್ತದಾ, ಹಾಗೆ ಅತ್ತುವುದಾದರೆ ನಾವೆಲ್ಲಾ ಯಾಕೆ ಓದಬೇಕು. ? ಅಷ್ಟು ಸುಲಭವಾಗಿ ದೇವರು ಸತ್ಯವೇದವನ್ನು ಬರೆಯಿಸಿದ್ದಾರಾ ! ಎಂದು ನೋಡುವಾಗ ಕಂಡಿತವಾಗಿಯೂ ಇಲ್ಲಾ ಈ ಎಲ್ಲಾ ರೀತಿ ಮಾಡಿದರೂ ಸತ್ಯವೇದವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಇನ್ನೂ ಕೆಲವರು ಸತ್ಯವೇದವನ್ನು ಯಾವ ರೀತಿ ಇಟ್ಟುಕೊಳ್ಳುತ್ತಾರೆ ಎಂದರೆ ರಾತ್ರಿಯಲ್ಲಿ ಬಯವಾಗುತ್ತದೆಂದು ತಲೆಯ ಪಕ್ಕದಲ್ಲಿ ಇಟ್ಟುಕೊಂಡು ಮಲಗುತ್ತಾರೆ. ಬೇರೆ ಕಲವರುಂಟು ಇವರು ಹೇಗೆಂದರೆ ರಾತ್ರಿಯಲ್ಲಿ ನಿದ್ರೆ ಬರದೆ ಇರುವಂತ ಸಮಯದಲ್ಲಿ ಸತ್ಯವೇದವನ್ನು ಓದಲು ಕುಳಿತುಕೊಳ್ಳುತ್ತಾರೆ, ಏಕೆಂದರೆ ಓದುವಾಗ ನಿದ್ರೆ ಬರಲೆಂದು.

> ನಾವು ಸತ್ಯವೇದವನ್ನು ಹೇಗೆ ಓದಬೇಕೆಂದರೆ ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪವಾಗಿ, ಏಕೆಂದರೆ ದೇವರು ಬರೆಯಿಸಿರುವುದು ಹಾಗೆಯೇ.
ಉದಾ :– ಆದಿಕಾಂಡದಲ್ಲಿ ದೇವರು ಆದಾಮನಿಗೆ, "ನೀನು ಹಣ್ಣನ್ನು ತಿಂದ ದಿನ ಸಾಯುವೆ ಎಂದರು" ಆದಾಮನು ಹಣ್ಣನ್ನು ತಿಂದನು ಆದರೆ ಆ ದಿನ ಆದಾಮನು ಸತ್ತನೆಂದು ಆದಿಕಾಂಡದಲ್ಲಿ ಬರೆದಿಲ್ಲಾ ಹಾಗಾದರೆ ಎಲ್ಲಿ ಬರೆದಿದೆ ಅಂದರೆ ಪೇತ್ರನ ಪತ್ರಿಕೆಯಲ್ಲಿ ಆದಾಮನು ತಿಂದ ದಿನ ಸತ್ತನೆಂದು ನಾವು ಅರ್ಥಮಾಡಿಕೊಳ್ಳ ಬಹುದು. ಅಂದರೆ ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪ,
**2 ಪೇತ್ರನು 3:8**

ಈ ರೀತಿಯಾಗಿ ಸತ್ಯವೇದವನ್ನು ನಾವು ಹುಡುಕಿ ಹೋದಿದರೆ ಸತ್ಯವೇದದಲ್ಲಿರುವಂತ ಆಳವಾದ ಸತ್ಯಗಳನ್ನು ತಿಳಿದುಕೊಳ್ಳಲು ಸಾಧ್ಯ. ಇಲ್ಲವಾದರೆ ಖಂಡಿತವಾಗಿ ನಮಗೆ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ದೇವರು 2ನೇ ದಿನವನ್ನು ಒಳ್ಳೆದೆಂದು ಏಕೆ ಹೇಳಲಿಲ್ಲವೆಂಬುದು ನಮಗೆ ಅರ್ಥವಾಗಬೇಕಾದರೆ ಇದನ್ನು ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪವೆಂಬದಾಗಿ ಓದಬೇಕು.
**ಎಫೆಸದವರಿಗೆ 2:2** ವಾಕ್ಯವನ್ನು ಮೊದಲು ಓದಬೇಕು ನಂತರ **ಯೋಬನು 15:15** ವಾಕ್ಯವನ್ನು ಓದಬೇಕು. ದೇವರು ಹೀಗೆಯೇ ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪವಾಗಿ ಸತ್ಯವನ್ನು ಬೋಧಿಸುವುದು. ದೇವರ ವಾಕ್ಯವನ್ನು ದೇವರೇ ಹಂಚಿದ್ದಾರೆ ಮತ್ತು ಪಾಲುಪಾಲಾಗಿ ಮಾಡಿದ್ದಾರೆ.
**ಯೆಶಾಯ 34:17** ದೇವರ ವಾಕ್ಯ ತಲತಲಾಂತರಕ್ಕೂ ಹೀಗೆಯೇ ಇರಬೇಕೆಂದು ಮಾಡಿದ್ದರೆ.

> ಆದಿಕಾಂಡದಲ್ಲಿ ಇರುವ ಅನೇಕ ಪ್ರಶ್ನೆಗೆ ಉತ್ತರವನ್ನು ಯಾರು ತಾನೇ ಹೇಳಲು ಸಾಧ್ಯ ? ಏಕೆಂದರೆ ಅವರೇ ತಪ್ಪಾಗಿ ಅರ್ಥಮಾಡಿಕೊಂಡಿರುವಾಗ ನಮಗೂ ಸಹ ತಪ್ಪಾಗಿ ಬೋಧಿಸುತ್ತಾರೆ. ಆದಕಾರಣ ಯಾರು ಬರೆಯಿಸಿದ್ದಾರೋ ಅವರನ್ನೇ ಕೇಳೋಣ!
**ಯೆಶಾಯ 34:16** ದೇವರು ಹೇಳುವುದೇನೆಂದರೆ "ಯೆಹೋವನ ಶಾಸ್ತ್ರದಲ್ಲಿ ಹುಡುಕಿ ಓದಿರಿ ಇವುಗಳಲ್ಲಿ ಯಾವದೂ ಇಲ್ಲದಿರದು ಎಲ್ಲವೂ ಜೊತೆ ಜೊತೆಯಾಗಿ ಇರುವುದು ಆತನ ಬಾಯಿಂದ ಅಪ್ಪಣೆಯಾಯಿತಲ್ಲವೆ".

> ಜೊತೆ ಜೊತೆಯಾಗಿ ಇರುತ್ತದೆ ಅಂದರೆ ಏನು ಇದರ ಅರ್ಥ? ಜೋಡಿ, ಹೊಂದಾಣಿಕೆ ಎಂದರ್ಥ. ಹೇಗೆಂದರೆ Negtive + positive, ಗಂಡು + ಹೆಣ್ಣು, ಪ್ರಶ್ನೆ + ಉತ್ತರ, ಅದೇ ರೀತಿ ಹಳೆ ಒಡಂಬಡಿಕೆ + ಹೊಸ ಒಡಂಬಡಿಕೆ, ಇವೆಲ್ಲವೂ ಜೋಡಿಯಾಗಿವೆ. ಹಳೆ ಒಡಂಬಡಿಕೆಯಲ್ಲಿನ ಪ್ರಶ್ನೆಗೆ ಆ ಪುಸ್ತಕದಲ್ಲಿ ಉತ್ತರ ಸಿಗದಿದ್ದರೆ ಹೊಸ ಒಡಂಬಡಿಕೆಯಲ್ಲಿ ಉತ್ತರ ದೊರಕುತ್ತದೆ ಇದೇ ಸತ್ಯ. ಇದನ್ನು ಬಿಟ್ಟು ಸತ್ಯವೇದಲ್ಲಿರುವ ಪ್ರಶ್ನೆಗೆ ಉತ್ತರ ಗೊತ್ತಿಲ್ಲವಾದರೆ ಉತ್ತರವನ್ನು ಬೇರೊಂದು ಧರ್ಮದಲ್ಲಿ ಹುಡುಕುವುದು ತಪ್ಪು.

> ಏಕೆಂದರೆ ದೇವರು ಆದಾಮನಿಗೆ "ನೀನು ಹಣ್ಣನ್ನು ತಿಂದ ದಿನ ಸಾಯುವೆ" ಎಂದು ಹೇಳಿದರೆಂದು ಸತ್ಯವೇದ ಬೋಧಿಸುತ್ತದೆ,
**ಆದಿಕಾಂಡ 2:17** ಅದೇ ರೀತಿ ಆದಾಮನು "ಹಣ್ಣನ್ನು ತಿಂದ ದಿನ" ಅಂದರೆ 1000 ವರ್ಷದೊಳಗಾಗಿ ಸತ್ತನು.
**2ಪೇತ್ರನು 3:8.** ಏಗೆಂದರೆ "ಕರ್ತನಿಗೆ ಒಂದು ದಿನವೆಂದರೆ 1000 ವರ್ಷವೆಂದು ಸತ್ಯವೇದ ಬೋಧಿಸುತ್ತದೆ" ಆದರೆ "ಇಸ್ಲಾಮಿಯರು" ಆದಾಮನು ಹಣ್ಣನ್ನು ತಿಂದ ದಿನ ಸಾಯುವನೆಂದು ದೇವರು ಹೇಳಲಿಲ್ಲಾ ತಿಂದರೆ ಸಾಯುವನೆಂದು ಹೇಳಿದರು ಎಂಬುದಾಗಿ ಬೋಧಿಸುತ್ತಾರೆ. ಏಕೆಂದರೆ ಆದಾಮನು 930 ವರ್ಷ ಬದುಕಿ ಸತ್ತನಲ್ಲ, ತಿಂದ ದಿನ ಸಾಯಲಿಲ್ಲವಲ್ಲವೆಂದು ಮತ್ತು ಸತ್ಯವೇದದಲ್ಲಿ ಸುಳ್ಳಿದೆ ಎಂದು ಇಸ್ಲಾಮಿಯರು ಬೋಧಿಸುತ್ತಾರೆ. ಆದರೆ ಕರ್ತನಿಗೆ ಒಂದು ದಿನವೆಂದರೆ ಆದಾಮನಿಗೆ 1000 ವರ್ಷಗಳೆಂದು ಅವರಿಗೆ ಗೊತ್ತಿಲ್ಲ. ಅವರಿಗೆ ಮಾತ್ರವಲ್ಲ ಕ್ರೈಸ್ತರೆಂದು ಹೇಳಿಕೊಳ್ಳುವ ಅನೇಕರಿಗೆ ಸಹ ಗೊತ್ತಿಲ್ಲ.

>	ಸಾಮಾನ್ಯವಾಗಿ ಕ್ರೈಸ್ತರೆಂದು ಹೇಳಿಕೊಳ್ಳುವ ಅನೇಕರು ಆದಾಮನು ಆತ್ಮದಲ್ಲಿ ಸತ್ತನೆಂದು ಹೇಳುವುದುಂಟು, ಆದರೆ ಸತ್ಯವೇದ ಮತ್ತೊಂದು ಕಡೆ ಬೋಧಿಸುವುದೇನೆಂದರೆ ಆದಾಮನು ಆತ್ಮೀಕವಾಗಿ ಇನ್ನು ಹುಟ್ಟಿರಲಿಲ್ಲ ಪ್ರಾಣಿಯಂತಿದ್ದನು ಎಂದು ಬೋಧಿಸುತ್ತದೆ.
**1ಕೊರಿಂಥ 15:45,46** ಹೀಗಿರುವಾಗ ಆತ್ಮದಲ್ಲಿ ಸಾಯಲು ಹೇಗೆ ತಾನೇ ಸಾಧ್ಯ. ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪ ಎಂಬುದಾಗಿ ಬರೆಯಿಸಿದ್ದಾರೆ, ಆದಕಾರಣ ಪ್ರಶ್ನೆಗೆ ಉತ್ತರವನ್ನು ಸತ್ಯವೇದದಲ್ಲಿಯೇ ಹುಡುಕಿ ಓದಬೇಕು.

>	ಸತ್ಯವು ಹೇಗಿದೆ ಎಂದರೆ "ಏಳು ಸಾರಿ ಪುಟಕ್ಕೆ ಹಾಕಿ ಶುದ್ಧ ಮಾಡಿದಂತಹ ಅಪ್ಪಟ ಬೆಳ್ಳಿಗೆ ಹೋಲಿಕೆಯಾಗಿದೆ" ನಮಗೆ ದೇವರು ಕೊಟ್ಟ ಪವಿತ್ರಾತ್ಮ ಇರುವುದಾದರೆ ನಿಜವಾಗಿಯೂ ಸತ್ಯವನ್ನು ಕಂಡುಕೊಳ್ಳಲು ಸಾಧ್ಯ, ಇಲ್ಲವಾದರೆ ಸುಳ್ಳನ್ನೇ ಸತ್ಯವೆಂದು ನಂಬುವ ಹಾಗೆ ಸೈತಾನನು ಮಾಡುತ್ತಾನೆ. ಆದಕಾರಣ ಸತ್ಯವೇದದಲ್ಲಿ ಹುಡುಕಿ ಓದಿರಿ "ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪವಾಗಿ ಇರುತ್ತದೆ".